## ಅಡುಗೆಯ ಜತೆ ಬಿಸಿ ನೀರು ಕಾಯಿಸುವ ಪ್ರಯೋಗ

Vijaya Karnataka - 16-05-13 - P.No - 05

# ವಿಶಿಷ್ಟ ವಾಹನ ರೂಪಿಸಿದ ವಿದ್ಯಾರ್ಥಿಗಳು

ವಿಕ ಚಿತ್ರಲೋಕ



ರಸ್ತೆಗಳಿಗೆ ಹೊಂದಿಕೊಳ್ಳುವಂತೆ ತಯಾರಿಸಿರುವ ಮೋಟಾರು ಯಂತ್ರದ ಜತೆ ಶಿರಡಿ ಸಾಯಿ ಕಾಲೇಜಿನ ತಾಂತ್ರಿಕ ವಿಭಾಗದ ವಿದ್ಯಾರ್ಥಿಗಳು.



ಕಾಲೇಜಿನ ತಾಂತ್ರಿಕ ವಿಭಾಗದ ವಿದ್ಯಾರ್ಥಿಗಳು ತಯಾರಿಸಿರುವ ತಾಂತ್ರಿಕ ವಿನ್ಯಾಸಗಳ ಬಗ್ಗೆ ಪ್ರಾತ್ಯಕ್ಷಿಕೆ.

■ **ವಿಕ ಸುದ್ದಿಲೋಕ** ಆನೇಕಲ್

ಇಲ್ಲಿಗೆ ಸಮೀಪದ ಶಿರಡಿ ಸಾಯಿ ಕಾಲೇಜಿನ ಅಂತಿಮ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳು ವಿನ್ಯಾಸಗೊಳಿಸಿದ್ದ ಮಾದರಿಗಳ ಪ್ರದರ್ಶನ ಸಾರ್ವಜನಿಕರ ಗಮನ ಸೆಳೆಯಿತು.

ಮೆಕ್ಯಾನಿಕಲ್, ಎಲೆಕ್ಟ್ರಿಕಲ್ ವಿಭಾಗದಲ್ಲಿ ವಿದ್ಯಾರ್ಥಿಗಳು ಆವಿಷ್ಕಾರ ಮಾಡಿದ್ದ ಮಾದರಿಗಳನ್ನು ಪ್ರದರ್ಶಿಸಿ ವೀಕ್ಷಕರಿಗೆ ಅವುಗಳ ತಯಾರಿಕೆ ಮತ್ತು ಸಾಮರ್ಥ್ಯದ ಬಗ್ಗೆ ಮಾಹಿತಿ ನೀಡಿದರು.

**ಕ್ಯಾಂಪಸ್**

ಮೆಕ್ಯಾನಿಕಲ್ ವಿಭಾಗದಲ್ಲಿ ರಕ್ಷಿತ್ ಶಾಸ್ತ್ರಿ ಮತ್ತು ತಂಡದವರು ತಯಾರಿಸಿದ್ದ 'ಆಲ್ ಟೆರ್ರೈನ್ ವೆಹಿಕಲ್' ವಿಶೇಷವಾಗಿ ಗಮನ ಸೆಳೆಯಿತು. 150 ಸಿಸಿ ಬೈಕ್ ಎಂಜಿನ್ ಬಳಸಿ ಮಿನಿ ಜೀಪ್ ಮತ್ತು ಟ್ರ್ಯಾಕ್ಟರ್‌ನ ಮಾದರಿಯಲ್ಲಿ ತಯಾರಿಸಿರುವ ಈ ಮೋಟಾರು ವಾಹನ ಕನಿಷ್ಠ 500 ಕೆ.ಜಿ ಭಾರ ಎಳೆಯಲಿದೆ. ಪ್ರತಿ ಲೀ. ಪೆಟ್ರೋಲ್‌ಗೆ ಕೃಷಿ ಸಂಬಂಧಿತ ಕೆಲಸಗಳಲ್ಲಿ ಮತ್ತು ಕಚ್ಚಾ ರಸ್ತೆಯಲ್ಲಿ ಸಂಚರಿಸುವಾಗ ಕನಿಷ್ಠ 15 ಕಿ.ಮೀ., ಉತ್ತಮ ರಸ್ತೆಯಲ್ಲಿ ಗರಿಷ್ಠ 25 ಕಿ.ಮೀ. ಚಲಿಸಲಿದೆ. ಎಲ್ಲ ರಸ್ತೆಗಳಿಗೆ ಹೊಂದಿಕೊಳ್ಳುವಂತೆ ವಿನ್ಯಾಸ ರೂಪಿಸಲಾಗಿದ್ದು, ಕೃಷಿ, ಸೇನೆ ಹಾಗೂ ಕ್ರೀಡೆಗಳಲ್ಲೂ ಈ ವಾಹನ ಬಳಸಬಹುದು ಎಂದಿದ್ದಾರೆ ರಕ್ಷಿತ್.

"2 ಲಕ್ಷ ರೂ. ಬೆಲೆಯ ಈ ವಾಹನಕ್ಕೆ ಟ್ರಾಲಿ ಜೋಡಿಸಲಾಗಿದ್ದು 500 ಕೆ.ಜಿ. ಭಾರ ಎಳೆಯುವ ಸಾಮರ್ಥ್ಯವಿದೆ. ಕೃಷಿ ಕೆಲಸಗಳಿಗೆ ಅತ್ಯಂತ ಸೂಕ್ತವಾಗಿರುವ ಈ ಯಂತ್ರಕ್ಕೆ ಟ್ರಾಲಿ ಬದಲು ಹೈಡ್ರಾಲಿಕ್ ಬಳಸಿ ನೇಗಿಲು ಜೋಡಿಸಿದರೆ ಜಮೀನು ಉಳುಮೆ ಮಾಡಬಹುದು. ಟ್ರ್ಯಾಕ್ಟರ್ ಸಂಚರಿಸಲಾಗದ ಸ್ಥಳಗಳಲ್ಲಿಯೂ ಇದು ಸಂಚರಿಸಬಹುದು. 4 ಸ್ಟ್ರೋಕ್ ಸಿಂಗಲ್ ಸಿಲಿಂಡರ್ ಎಂಜಿನ್ ಮಾತ್ರ ಕೊಂಡು ತಂದೆವು. ಉಳಿದ ಎಲ್ಲ ವಿನ್ಯಾಸವನ್ನು ಕಾಲೇಜಿನಲ್ಲಿಯೇ ರೂಪಿಸಲಾಯಿತು," ಎಂದು ತಂಡದ ಸದಸ್ಯೆ ಎಸ್.ರೂಪ ತಿಳಿಸಿದ್ದಾರೆ.

ಯಂತ್ರ ತಯಾರಿಕೆಗೆ ತಂಡದಲ್ಲಿ ರಾಹುಲ್ ಪಾಟೀಲ್, ರಾಜೀವ್ ರೋಣದ್, ರಘುನಾಥ ರೆಡ್ಡಿ ನವೀನ್ ಕುಲಕರ್ಣಿ, ಟಿ.ಜಿ.ವಿಜಯಕುಮಾರ್ ನೆರವಾಗಿದ್ದಾರೆ.

ಇದೇ ವಿಭಾಗದಲ್ಲಿ ಭೀಮೇಶ್ ಮತ್ತು ತಂಡದವರು ರಚಿಸಿದ್ದ ಅಡುಗೆಯ ಜತೆ ನೀರು ಕಾಯಿಸುವ ತಂತ್ರಜ್ಞಾನವೂ ಗಮನ ಸೆಳೆಯಿತು. 'ಅಡುಗೆ ಮಾಡುವಾಗ ಸ್ಟೌನಿಂದ ಹೊರಬರುವ ಬೆಂಕಿ ಪಾತ್ರೆಯ ತಳವನ್ನು ಬಿಸಿ ಮಾಡಿದರೆ, ಸುತ್ತ ಉರಿಯುವ ಜ್ವಾಲೆಯ ಶಕ್ತಿ ಅಪವ್ಯಯವಾಗುತ್ತದೆ. ಬರ್ನರ್ ಸುತ್ತ ತಾಮ್ರದ ಕೊಳವೆಯನ್ನು ವೃತ್ತಾಕಾರವಾಗಿ ಜೋಡಿಸಿ ಇದರೊಳಗೆ ನೀರು ಹಾಯಿಸಿದರೆ ಸಾಕು, ಇತ್ತ ಅಡುಗೆಯ ಜತೆಗೆ, ಪಕ್ಕದಲ್ಲಿ ಬಿಸಿ ನೀರು ಸಿದ್ಧ.

ಸೋಲಾರ್ ಶಕ್ತಿ ಬಳಸಿ ನೀರಲ್ಲಿರುವ ಕಳೆ ಮತ್ತು ಪಾಚಿ ತೆಗೆಯುವ ಯಂತ್ರವನ್ನು ಎಲೆಕ್ಟ್ರಾನಿಕ್ಸ್ ವಿಭಾಗದ ವಿದ್ಯಾರ್ಥಿಗಳು ತಯಾರಿಸಿದ್ದರು. ಇಂತಹ ನೂರಾರು ಆವಿಷ್ಕಾರಗಳನ್ನು ವಿದ್ಯಾರ್ಥಿಗಳು ಭೇಷ್ ಎನಿಸಿಕೊಂಡರು. ಕಾಲೇಜಿನ ಮುಖ್ಯಸ್ಥ ಅರುಣ್‌ಕುಮಾರ್, ವಿಭಾಗ ಮುಖ್ಯಸ್ಥ ಸಿದ್ದೇಶ್ ವಿದ್ಯಾರ್ಥಿಗಳ ಪರಿಶ್ರಮವನ್ನು ಅಭಿನಂದಿಸಿದ್ದಾರೆ.